



ಅರುಣ ಪಿ. ಭಟ್ಟ

## ವಾರಭವಿಷ್ಯ 30.1.2020ರಿಂದ 5.2.2020ರ ವರೆಗೆ




ನೀವು ದೀರ್ಘಕಾಲದವರೆಗೆ ಕಾಯಿಲೆಯೊಂದಿಗೆ ಹೋರಾಡುತ್ತಿದ್ದರೆ ಈ ವಾರದಲ್ಲಿ ನೀವು ಅದರಿಂದ ಪರಿಹಾರ ಪಡೆಯಬಹುದು. ಹಣ ಸಂಪಾದಿಸಲು ನೀವು ವಿಭಿನ್ನ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು.

ಶುಭದಿನ 2. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಒಂದೇ ಸಲಕ್ಕೆ ಹಲವು ಅವಕಾಶಗಳು ನಿಮ್ಮನ್ನು ಹುಡುಕಿಕೊಂಡು ಬರುತ್ತವೆ. ಸರ್ಕಾರಿ ನೌಕರರಿಗೆ ವರ್ಗಾವಣೆ ಆದರೂ ಆಗಬಹುದು.ವೈಯಕ್ತಿಕ ಸಂಬಂಧದಲ್ಲಿ ಬಹಳ ಹುಷಾರಾಗಿರಬೇಕು. ಉತ್ತಮ ಅವಕಾಶಗಳು ಬರುತ್ತವೆ.

ಶುಭದಿನ 1.ಕಾಲಭೈರವಾಷ್ಟಕ ಸ್ತೋತ್ರ ಪಠಿಸಿರಿ.




ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದರೆ ಅದರ ಶ್ರಮದ ಫಲವನ್ನು ಪಡೆಯಲು ಇದು ಸರಿಯಾದ ಕಾಲ. ಹೊಸ ವಸ್ತುವೊಂದನ್ನು ಖರೀದಿ ಮಾಡುವ ಪಕ್ಷದಲ್ಲಿ ಖರೀದಿಸುವ ನಿಮ್ಮ ನಿರ್ಧಾರವನ್ನು ಮುಂದಕ್ಕೆ ಹಾಕುವುದೇ ಉತ್ತಮ.

ಶುಭದಿನ 30. ಶ್ರೀಗೋವಿಂದಾಷ್ಟಕಮ್ ಪಠಿಸಿರಿ.




ನಿಮ್ಮ ಆದಾಯದಲ್ಲಿ ಈ ವಾರ ಹೆಚ್ಚಳ ಕಾಣಿಸಿಕೊಳ್ಳಲಿದೆ. ಈ ಹಿಂದೆ ನೀವು ಹಾಕಿದ ಶ್ರಮಕ್ಕೆ ಒಂದೊಂದಾಗಿ ಪ್ರತಿಫಲ ದೊರೆಯಲು ಆರಂಭವಾಗುತ್ತದೆ. ಸಾಮಾಜಿಕವಾಗಿ ನಿಮ್ಮ ವರ್ಚಸ್ಸು, ಕೀರ್ತಿ ಹೆಚ್ಚಾಗುತ್ತದೆ. ಭದಿನ 2. ವಿಷ್ಣುಸಹಸ್ರನಾಮ ಓದಿರಿ.




ಉದ್ಯೋಗ ಅಥವಾ ವ್ಯಾಪಾರ ನಿಮಿತ್ತವಾಗಿ ದೂರ ಪ್ರಯಾಣ ಮಾಡಬೇಕಾದ ಸನ್ನಿವೇಶ ಎದುರಾಗಲಿದೆ. ಹಣ ಹೂಡಿಕೆಯಲ್ಲಿ ಉತ್ತಮ ಲಾಭ. ಉದ್ಯೋಗ ಸ್ಥಳದಲ್ಲಿ ಸ್ವಲ್ಪಮಟ್ಟಿಗೆ ಒತ್ತಡ ಕಾಣಿಸಿಕೊಳ್ಳಬಹುದು. ಆರೋಗ್ಯದಲ್ಲೂ ಏರುಪೇರಾಗುತ್ತದೆ.

ಶುಭದಿನ 4. ದೇವಿ ಆರಾಧನೆ, ಸೌಂದರ್ಯಲಹರಿ ಪಠಿಸಿರಿ.




ವಾರದ ಶುರುವಿನಿಂದಲೇ ಅಂದುಕೊಂಡ ಯೋಜನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತದೆ. ಜತೆಗೆ ಕೆಲಸ ಕಾರ್ಯಗಳಲ್ಲಿ ಆಗುತ್ತಿರುವ ಪ್ರಗತಿ ಬಗ್ಗೆ ತೃಪ್ತಿ ಮೂಡುತ್ತದೆ. ನಿಮ್ಮ ಮೇಲಧಿಕಾರಿ ಮೆಚ್ಚುಗೆಯನ್ನು ಪಡೆಯುತ್ತೀರಿ.

ಶುಭದಿನ 3. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.




ಪುಣ್ಯಕ್ಷೇತ್ರ ದರ್ಶನಕ್ಕೆ ತೆರಳುವ ಸಾಧ್ಯತೆ. ಅಗತ್ಯಕ್ಕೆ ತಕ್ಕಂತೆ ಈ ವಾರ ಕೆಲ ನಿಯಮಗಳನ್ನು ಅಳವಡಿಸಿಕೊಳ್ಳಲಿದ್ದೀರಿ. ಇದರಿಂದ ಮಾರುಕಟ್ಟೆಯ ಹಿಡಿತ ಸಾಧಿಸಲು ಸಾಧ್ಯವಾಗುತ್ತದೆ. ಆದರೆ ಇದಕ್ಕಾಗಿ ನೀವು ಹೆಚ್ಚಿನ ಶ್ರಮವನ್ನು ಹಾಕಬೇಕಾಗುತ್ತದೆ.

ಶುಭದಿನ 5. ಆದಿತ್ಯ ಹೃದಯ ಪಠಿಸಿರಿ.




ಕುಟುಂಬ ಸದಸ್ಯರ ಜತೆಗೆ ಹೆಚ್ಚಿನ ಸಮಯ ಕಳೆಯುವ ಸಾಧ್ಯತೆ ಇದೆ. ಇದೇ ವೇಳೆ ಕುಟುಂಬದ ಸದಸ್ಯರಿಗೆ ಕೆಲವು ಕೆಲಸಗಳನ್ನು ವಹಿಸುತ್ತೀರಿ. ಅವುಗಳನ್ನು ತುಂಬ ಶ್ರದ್ಧೆಯಿಂದ ಅವರು ಮಾಡಿ ಮುಗಿಸುತ್ತಾರೆ. ಭೂ ವ್ಯಾಜ್ಯವೊಂಕ್ಕೆ ಶ್ರಮ ಹಾಕಲಿದ್ದೀರಿ.

ಶುಭದಿನ 2. ಚಂಡಿ ಪಾರಾಯಣ ಮಾಡಿರಿ.




ವಾರದ ಆರಂಭದಿಂದಲೇ ನಿಮ್ಮ ಕೆಲಸಗಳಿಗೆ ವೇಗ ನೀಡುತ್ತೀರಿ. ನಿಮ್ಮ ಕಾರ್ಯ ಯೋಜನೆಗಳನ್ನು ಅಂತಿಮಗೊಳಿಸಲು ಅಧಿಕಾರಿಗಳ ನೆರವು ದೊರೆಯುತ್ತದೆ. ಇದರಿಂದ ನಿಮ್ಮ ಕೆಲಸ ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಲು ಸಾಧ್ಯವಾಗುತ್ತದೆ.

ಶುಭದಿನ 3. ಶ್ರೀ ಲಕ್ಷ್ಮೀ ನರಸಿಂಹ ಪಂಚರತ್ನ ಓದಿರಿ.




ನಿಮ್ಮ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಲು ಅಗತ್ಯ ಇರುವ ಸಲಕರಣೆಗಳನ್ನು ಸ್ಥಳೀಯ ಮಾರುಕಟ್ಟೆಯಿಂದ ಖರೀದಿ ಮಾಡುವ ಸಾಧ್ಯತೆ ಇದೆ. ಹಣ ಹೂಡಿಕೆಗೆ ಅನುಕೂಲ ಆಗಲಿದೆ. ಈ ಅವಧಿಯಲ್ಲಿ ದೈಹಿಕ ಸಮಸ್ಯೆಗಳು ಕಾಡಬಹುದು.

ಶುಭದಿನ 4. ವಿಷ್ಣು ಸಹಸ್ರನಾಮ ಪಠಿಸಿರಿ.




ಆದಾಯದಲ್ಲಿ ಹೆಚ್ಚಳ ಆಗುತ್ತಾ ಹೋಗುತ್ತದೆ. ಆ ಮೂಲಕ ಜೀವನ ಶೈಲಿ ಹಾಗೂ ಜೀವನ ಮಟ್ಟ ಉತ್ತಮಗೊಳ್ಳಲಿದೆ. ಈ ವಾರ ಕೆಲವು ಉಪಯುಕ್ತ ಸಂಪನ್ಮೂಲಗಳನ್ನು ಕ್ರೋಡೀಕರಿಸಲು ಸಾಧ್ಯವಾಗುತ್ತದೆ.

ಶುಭದಿನ 2. ಶಿವಕವಚ ಪಠಣ ಮಾಡಿರಿ.




ವೃತ್ತಿಪರ ಬದುಕಿನಲ್ಲಿ ಹಲವು ಅವಕಾಶಗಳು ನಿಮಗೆ ದೊರೆಯಲಿವೆ. ಇದರಿಂದ ನಿಮ್ಮ ಉತ್ಸಾಹ ಹೆಚ್ಚಾಗಲಿದೆ. ಈ ಹಿಂದೆ ನಿಮ್ಮನ್ನು ಮಾನಸಿಕವಾಗಿ ಚಿಂತೆಗೆ ಈಡು ಮಾಡಿದ್ದ ವಾತಾವರಣವು ಕರಗಲಿದೆ.

ಶುಭದಿನ 5. ರಾಘವೇಂದ್ರ ಸ್ವಾಮಿ ಭಜನೆ ಮಾಡಿರಿ.


DHEEPAM
LAMP OIL
BLEND OF 5 OILS
ದೀಪದ ಬೆಳಕಲ್ಲಿ
ಒಂದು ದೈವೀಕ
ಅನುಭವ
ಸುಗಂಧ ಸುವಾಸನೆ
ಹರಡುವ ಪಂಚ ದೀಪ ಎಣ್ಣೆ
